ದಿ: 11.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು 1 ಮತ್ತು 2 ನೇ ಎದುರುದಾರರ ಪರ ವಕೀಲರಿಂದ

ನನ್ನ ಗಂಡ ತೆಕ್ಕಲಕೋಟೆಯಿಂದ ದೇವಿನಗರ ಕ್ಯಾಂಪ್ ಕಡೆ ಅಪಘಾತದ ದಿವಸ ಬರುತ್ತಿದ್ದ. ನನ್ನ ಗಂಡನ ತಪ್ಪಿನಿಂದ ಅಪಘಾತ ಆಗಿತ್ತು ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬುಲೆರೋ ವಾಹನದ ಎಲ್ಲಾ ದಾಖಲಾತಿಗಳು ಸರಿ ಇವೆ ಎಂದರೆ ಸರಿ.

ಪಾಟೀ ಸವಾಲು 3 ನೇ ಎದುರುದಾರರ ಪರ ವಕೀಲರಿಂದ

ನನ್ನ ಗಂಡ ಚಲಾಯಿಸುತ್ತಿದ್ದ ಬೈಕ್ ನನ್ನ ಚಿಕ್ಕಪ್ಪ ವೆಂಕಟೇಶಗೆ ಸೇರಿತ್ತು ಎಂದರೆ ಸರಿ. ವೆಂಕಟೇಶರವರನ್ನು ಈ ಕೇಸಿನಲ್ಲಿ ಪಾರ್ಟಿ ಮಾಡಿಲ್ಲ. 1 ನೇ ಎದುರುದಾರರಿಗೆ ಸರಕು ಸಾಗಣೆ ವಾಹನಗಳನ್ನು ನಡೆಸಲು ಡಿ.ಎಲ್ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೆ ವಾಹನ ಚಲಾಯಿಸಲು ಸರಿಯಾದ ಚಾಲನಾ ಪರವಾನಗಿ ಪತ್ರ ಇಲ್ಲದೇ ಇರುವ ಕಾರಣ 3 ನೇ ಎದುರುದಾರರು ಪರಿಹಾರ ಕೊಡಲು ಭಾಧ್ಯಸ್ತರಲ್ಲ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .)

ಓ . ಹೇ. ಕೆ . ಸರಿ ಇದೆ .

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಳ್ಳಾರಿ .